ಯೋಜನೆಯಂತೆ ಕಾರ್ಯೋನ್ಮುಖನಾದ.

ಕುಳ್ಳಿಯನ್ನು ಬಂಧಿಸಿದ್ದ ಸರಪಳಿಯನ್ನೂ ಬೇಲಿಯ ಗಿಡಕ್ಕೆ ಕಟ್ಟಿದವನೇ ಮೇಲಿನ ಕಾಡೊಳಕ್ಕೆ ನುಗ್ಗಿ ಹೋಗಿ ಉದ್ದನೆಯ ಗಟ್ಟಿ ಹಂಬೊಂದನ್ನು ಕುಯ್ದು ತಂದ. ಅದರ ಒಂದು ತುದಿಯನ್ನು ಬಿದರು ಬೊಂಬೆಯ ಕಂಬಕ್ಕೆ ಬಿಗಿಯಾಗಿ ಕಟ್ಟಿದ. ಇನ್ನೊಂದು ತುದಿಯನ್ನು ಹಿಡಿದು ತೋಟದೊಳಗಿನ ನೀರಿನ ಕಾಲುವೆಯ ಬದಿಯಲ್ಲಿ ನಡೆದುಹೋಗಿ ಹಗ್ಗ ಎಟಕುತ್ತದೆಯಾ ಎಂದು ಅಂದಾಜು ಮಾಡಿದ... ಆ ಹಂಬಿನ ತುದಿಯನ್ನು ನಾಯಿಯ ಸರಪಳಿಯ ಇನ್ನೊಂದು ತುದಿಗೆ ಗಂಟು ಹಾಕಿದ...

ಬಕೆಟಿನೊಳಗಿದ್ದ ರೊಟ್ಟಿಯ ಗಂಟನ್ನು ತೆಗೆದುಕೊಂಡು ಅಡಸಾಲೆಯ ಕಡೆಗೆ ನಡೆಯತೊಡಗಿದ. ಕುಳ್ಳಿ ಕುಂಯ್ ಕುಂಯ್ ಎಂದು ನೆಗೆದಾಡತೊಡಗಿತು. ಹಗ್ಗ ಎಟಕುವವರೆಗೂ ಅವನನ್ನು ಹಿಂಬಾಲಿಸಿ ಅಲ್ಲಿಯೇ ನಿಂತು ಹಗ್ಗ ಜಗ್ಗುತ್ತ ಕುಂಯ್ ಗುಡತೊಡಗಿತು....

ಮಾಟಣ್ಣ ತಲುಪುವ ವೇಳೆಗೆ ಅಡಸಾಲೆಯಲ್ಲಿ ಕಾಡು ಹಬ್ಬದ ಸಿದ್ಧತೆಯೆಲ್ಲಾ ಆಗಿತ್ತು. ಕೋಳಿ ಮಾಂಸದ ಸಾರಿನ ಘಮಲು ಕಾಡಿನಲ್ಲೆಲ್ಲಾ ಪಸರಿಸಿತ್ತು. ಅಡಸಾಲೆಯ ಬೆಂಕಿ ಧಗಧಗಿಸುತ್ತಿತ್ತು. ಅದರ ಸುತ್ತ ಸೇಂದಿ ಮೊಗೆ, ಚಿಪ್ಪು ಇಟ್ಟುಕೊಂಡು ಗೆಳೆಯರೆಲ್ಲಾ ಹುರುಪಿನಿಂದ ಕುಳಿತುಕೊಂಡಿದ್ದರು. ಮಾಟಣ್ಣನೂ ತನಗೆ ಮೀಸಲಿದ್ದ ಮಣೆಯ ಮೇಲೆ ಕುಳಿತುಕೊಂಡ. ಬಾಲಪ್ಪ ಅವರೆಲ್ಲರ ಮುಂದೆ ಕುಡಿ ಬಾಳೆಎಲೆ ಹರಡಿ ಮಾಂಸವನ್ನು ಬಡಿಸತೊಡಗಿದ. ರೊಟ್ಟಿಯ ಗಂಟುಗಳನ್ನು ಬಿಚ್ಚುತ್ತಾ, ಹಿರಿಯ ನಾಗರಿಕರು ಹಬ್ಬದ ಸಡಗರ ಸವಿಯಲು ಸಜ್ಜಾದರು....



ಅಲ್ಲಿ....

ಕೊತ್ತಿಕೆರೆ ಅಗಾಡಿಯ ಮೆಣಸಿನ ತೋಟದ ಬಳಿ ನಾಯಿಯ ಬೊಗಳಾಟ ಕೇಳಿಬರತೊಡಗಿತು.

ಒಂದಲ್ಲ...... ಎರಡಲ್ಲ..... ಹತ್ತಾರು.....

ಬೊಗಳಾಟ......ಕಚ್ಚಾಟ...... ಕಿರುಚಾಟದ ಸದ್ದು ತಾರಕಕ್ಕೇರತೊಡಗಿತು.

'ನಾಯಿ ಕಟ್ಟಾಕಿ ಬಂದಿದ್ಯಾ ಮಾಟಣ್ಣ..... ಯಾವ್ದೋ ಪೋಲಿನಾಯಿ ಬಂದು ಕಡಿದು ಹಾಕಿದ್ವಾ ಏನಾ' ಎಂದ ಮಲ್ಲೇಗೌಡ. 'ಏನಾಯ್ತೋ ಏನೋ' ಎಂದು ಗಾಬರಿಗೊಂಡ ಮಾಟಣ್ಣ, ಎಂಜಲು ಕೈ ಕೊಡವುತ್ತಾ ತನ್ನ ಮೆಣಸಿನ ತೋಟದ ದಿಕ್ಕಿಗೆ ಓಡತೊಡಗಿದ.

'ಊರ್ ನಾಯಿ ಎಲ್ಲಾ ಅಲ್ಲಿ ಬಂದು ಸೇರ್ಕಂಡಿದವೆ ಅಂದ್ರೆ ಮಾಟಣ್ಣನ 'ಕುಳ್ಳಿ' ಏನು ಬೆದೆಗೆ ಬಂದಿತ್ತಾ ಏನಾ' ಸಿದ್ದೇಗೌಡ ಗೇಲಿ ಮಾಡುವ ವೇಳೆಗೆ ಮಾಟಣ್ಣ ಅರ್ಧದಾರಿ ನೆಗೆಯುತ್ತ ಹೋಗಿದ್ದ.

ಮೆಣಸಿನ ತೋಟದ ಸ್ಥಿತಿಯನ್ನು ಕಂಡ ಮಾಟಣ್ಣನ ಎದೆ ಧಸಕ್ಕೆಂದಿತು.... ಅವನಿಗೇನೂ ವಿವರಿಸಿ ಹೇಳಬೇಕಾಗಿರಲಿಲ್ಲ. ಬೆದೆಗೆ ಬಂದ ತನ್ನ 'ಕುಳ್ಳಿ'ಯನ್ನು ಒಲಿಸಿಕೊಳ್ಳಲು ದೊಡ್ಡ ಪೈಪೋಟಿಯೇ ಏರ್ಪಟ್ಟಿದೆ..... ಊರ ಗಂಡು ನಾಯಿಗಳೆಲ್ಲ ಅಲ್ಲಿ ನೆರೆದು 'ಕುಳ್ಳಿ'ಯನ್ನು ತೋಟದ ತುಂಬಾ ಓಡಾಡಿಸಿ ಭಾರೀ ಮಾರಾಮಾರಿಯನ್ನೇ ನಡೆಸಿಬಿಟ್ಟಿವೆ. ಹಗ್ಗವನ್ನೆಳೆದುಕೊಂಡು ತೋಟದ ತುಂಬಾ ಓಡಾಡಿದ್ದರಿಂದ ಗಿಡಗಳೆಲ್ಲಾ ಬುಡಕ್ಕೇ ಮುರಿದು ನೆಲಸಮವಾಗಿವೆ. ಅದರ ಮೇಲೆ ಹಿಂಡು ನಾಯಿಗಳ ಕುಣಿದಾಟ ಬೇರೆ...

ಪೈಪೋಟಿಯಲ್ಲಿ ಭಾಗವಹಿಸಿ ಸೋತ ನಾಯಿಗಳೆಲ್ಲಾ ಅಲ್ಲಲ್ಲಿ ಮುಂಗಾಲು ಚಾಚಿ ಕುಳಿತು ಏದುಸಿರು ಬಿಡುತ್ತಾ ಮುಂದಿನ ಅವಕಾಶಕ್ಕಾಗಿ ಎದುರು ನೋಡುತ್ತಿವೆ.

ಗಡವ ಕರಿಯ ನಾಯಿಯೊಂದು ಪೈಪೋಟಿಯಲ್ಲಿ ಗೆದ್ದು ಠೀವಿಯಿಂದ ನಿಂತಿದೆ! ಪರಸ್ಪರ ಒಂದಾಗಿ ಹೋಗಿದ್ದ 'ಕುಳ್ಳಿ' ಹಾಗೂ ಅದು ವಿರುದ್ಧ ದಿಕ್ಕಿಗೆ ಮುಖಮಾಡಿ ನಿಂತು, ಬಿಡಿಸಲಾರದ ಗಂಟಿಗೆ ಸಿಲುಕಿದವರಂತೆ ತುಸುಗಾಡುತ್ತಿವೆ.

ಮಾಟಣ್ಣನನ್ನು ಕಂಡ 'ಕುಳ್ಳಿ' ತಪ್ಪಿತಸ್ಥಳಂತೆ ತಲೆತಗ್ಗಿಸಿ ನಾಚಿಕೆಯಿಂದ ವಾರೆಗಣ್ಣಿನಲ್ಲಿ ನೋಡಿತು.

ಕ್ಷಣದ ಸಡಗರದ ಸೆಳೆತಕ್ಕೆ ಒಳಗಾಗಿ ಎಂತಹಾ ಘೋರ ನಡೆಯಲು ಕಾರಣನಾದೆ. ಈಗ ಬರುವ ಮಗ-ಸೊಸೆಯನ್ನು ಹೇಗೆ ಎದುರಿಸುವುದು ಎಂದು ಹಲುಬುತ್ತಾ ಮಾಟಣ್ಣ ಬಿದರುಬೊಂಬೆಯ ಕಂಬಕ್ಕೊರಗಿ ನಿಧಾನಕ್ಕೆ ಕುಸಿಯತೊಡಗಿದ.

●